ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 21/2021**

**ಪ್ರಾಸಾ- 5 ಚಾಸಾ- 6**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಚಂದ್ರಶೇಖರ್ |
| ತಂದೆಯ ಹೆಸರುಃ | : | ದೇವೇಗೌಡ |
| ವಯಸ್ಸುಃ | : | 46 ವರ್ಷ |
| ಉದ್ಯೋಗಃ | : | ಕೂಲಿ |
| ವಾಸ | : | ಹಳೇಬೀಡು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:25-11-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1 ನನ್ನ ಮಗ. ಚಾಸಾ-2 ರಿಂದ 5 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ದಿನಾಂಕ 9-1-20ರಂದು ನಾನು ಸಂಜೆ 5-45 ಗಂಟೆಗೆ ಹಳೇಬೀಡಿನಲ್ಲಿ ಕೆಲಸ ಮಾಡಿಕೊಂಡಿದ್ದಾಗ ಚಾಸಾ-2 ರವರು ನನಗೆ ಕರೆ ಮಾಡಿ ಕರೆಸಿಕೊಂಡರು. ನನ್ನ ಮಗನಿಗೆ ವೆಲ್ಡಿಂಗ್ ಶಾಪ್ ನಲ್ಲಿ ಮುಬಾರಕ್ ಬಣ್ಣ ಎರಚಿ ಸೈಫುಲ್ಲಾ ಬೇಡ ಬೇಡ ಎಂದರೂ ಬೆಂಕಿಹಚ್ಚಿ ಸುಟ್ಟಗಾಯ ಮಾಡಿರುತ್ತಾರೆಂದು ನನಗೆ ತಿಳಿಸಿದರು. ನಾನು ಸ್ಥಳಕ್ಕೆ ಬಂದಾಗ ನನ್ನ ಮಗ ವೆಲ್ಡಿಂಗ್ ಶಾಪ್ ಮುಂದೆ ಇದ್ದನು. ಆತನ ಎಡಕೈ ಮತ್ತು ಎಡಕಾಲಿನಲ್ಲಿ ಸುಟ್ಟಗಾಯಗಳಾಗಿ ಬೊಬ್ಬೆ ಬಂದಿತ್ತು. ಆತನನ್ನು ಹಳೇಬೀಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಅಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ ಹಾಸನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಯಾವುದೇ ಕಾರಣ ಇಲ್ಲದೆ ನನ್ನ ಮಗನ ಮೇಲೆ ಬಣ್ಣ ಎರಚಿ ಬೆಂಕಿ ಹಚ್ಚಿರುತ್ತಾರೆ. ಆ ಸಮಯದಲ್ಲಿ ನನ್ನ ಮಗ ಒಂದು ಪ್ಯಾಂಟ್ ಶರ್ಟ್ ಧರಿಸಿದ್ದನು. ಅದು ಸುಟ್ಟುಹೋಗಿತ್ತು. ಅದು ಅಲ್ಲಲ್ಲಿ ಸುಟ್ಟುಹೋಗಿತ್ತು. ಅದನ್ನು ಹಳೇಬೀಡು

ಪೊಲೀಸರು ಹಾಜರುಪಡಿಸುವಂತೆ ಹೇಳಿದರು, ಅದನ್ನು ನಾನು ಪೊಲೀಸರ ಮುಂದೆ ಹಾಜರುಪಡಿಸಿದೆನು, ಅದನ್ನು ಮಹಜರು ಮಾಡಿ ವಶಪಡಿಸಿಕೊಂಡರು. ಅದಕ್ಕೆ ನಾನು ಸಹಿ ಹಾಕಿದೆನು. ಈಗ ತೋರಿಸಿದ ನಿಪಿ-5 ರಲ್ಲಿರುವ ರುಜು ನನ್ನದೆ. ಅದನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಆ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವು ನ್ಯಾಯಾಲಯದ ಮುಂದಿರುವ ಎಂ.ಒ.4 ಮತ್ತು 5ಆಗಿವೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಕೆ ವಕೀಲರಿಂದಃ**

ಚಾಸಾ-2 ರವರು ನನ್ನ ಮಗನಿಗೆ ಸುಟ್ಟಗಾಯಗಳಾಗಿವೆ ಎಂದು ಫೋನ್ ಮಾಡಿದರು. ನಾನು ಅಲ್ಲಿ ಹಳೇಬೀಡು ಟೌನಿನಲ್ಲಿ ಕೆಲಸ ಮಾಡಿಕೊಂಡಿದ್ದೆನು. ವಿಚಾರ ತಿಳಿದು ಸ್ಥಳಕ್ಕೆ ಹೋದೆನು. ನನ್ನ ಮಗನನ್ನು ನಾನು ಮತ್ತು ಅಲ್ಲಿದ್ದ ಇತರರು ಸೇರಿ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಹೋದೆವು. ಬೆಂಕಿ ಹಾಕಿರುವುದನ್ನು ನಾನು ನೋಡಿಲ್ಲ ಎಂದರೆ ಸರಿ. ವೈದ್ಯರ ಮುಂದೆ ನನ್ನ ಮಗನಿಗೆ ಯಾವ ರೀತಿ ಬೆಂಕಿಹತ್ತಿತೆಂದು ಹೇಳಿರುತ್ತೇನೆ. ಮುಬಾರಕ್ ವೆಲ್ಡಿಂಗ್ ಶಾಪ್ ನಲ್ಲಿ ಕೆಲಸ ಮಾಡುವವ, ಮಾಲೀಕನಲ್ಲ. ನನ್ನ ಮಗ ಮುಬಾರಕ್ ವೆಲ್ಡಿಂಗ್ ಶಾಪ್ ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದನೆಂದರೆ ಸರಿಯಲ್ಲ. ಅವನು ಅಲ್ಲಿ ಕೆಲಸ ಮಾಡುತ್ತಿರುವಾಗ ಆಗಿರುವ ಸುಟ್ಟ ಗಾಯ ಎಂದರೆ ಸರಿಯಲ್ಲ. ಅದನ್ನು ಮರೆಮಾಚಿ ಸುಳ್ಳು ದೂರುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

2.ಬಟ್ಟೆ ತೆಗೆದುಕೊಂಡು ಬನ್ನಿ ಎಂದು ಪೊಲೀಸರು ಹೇಳಿದರು. ನಿಪಿ-5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಬೆಂಕಿ ಬಿದ್ದಿದೆ ಎಂದು ಬರೆದಿದ್ದಾರೆ, ಪೂರ್ತ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎನ್ನುತ್ತಾರೆ. ಪೊಲೀಸರು ಕೇಳಿದ್ದಾರೆ ಎನ್ನುವ ಕಾರಣಕ್ಕೋಸ್ಕರ ಎಂ.ಒ.4 ಮತ್ತು 5 ನ್ನು ಸೃಷ್ಟಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸಹಿ ಹಾಕಲು ಹೇಳಿದ ಕಾರಣ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೇನೂ ಗೊತ್ತಿಲ್ಲ, ಪೊಲೀಸರ ಜೊತೆ ಶರೀಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**